MARCH 01, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಮಧ್ಯಪ್ರಾಚ್ಯ ದೇಶಗಳಿಗೆ, ವಿಮಾನ ಸಂಚಾರ ಸ್ಥಗಿತ;** ಯುದ್ಧಗ್ರಸ್ಥ ರಾಷ್ಟ್ರಗಳಲ್ಲಿ ಸಿಲುಕಿರುವ ಕನ್ನಡಿಗರಿಗೆ, ನೆರವಿನ ಹಸ್ತ – ಮುಖ್ಯಮಂತ್ರಿ.
- **'ಅಧಿಸೂಚಿತ ಕಾಯಿಲೆ'ಯಾಗಿ, ಹಾವು ಕಡಿತ;** ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ, ಉಚಿತ ಲಸಿಕೆಗೆ, ವ್ಯವಸ್ಥೆ.
- **ಮೂರು ದಿನಗಳ, ಕಿಸಾನ್ ಸ್ವರಾಜ್,** ಸಮ್ಮೇಳನ; ಮೈಸೂರಿನಲ್ಲಿ ಇಂದು ಸಮಾರೋಪ.
- **ಕಲಬುರಗಿಯಲ್ಲಿ ಇಂದಿನಿಂದ,** ಐ.ಟಿ.ಎಫ್, ಮಹಿಳಾ ಅಂತಾರಾಷ್ಟ್ರೀಯ ಟೆನಿಸ್ ಪಂದ್ಯಾವಳಿ.

<><><>

**ಈಗ ವಾರ್ತೆಗಳ ವಿವರ**

<><><>

**ಬಳ್ಳಾರಿ ಮೂಲದ 32 ಜನ,** ದುಬೈನಲ್ಲಿ ಸಿಲುಕಿರುವ ಬಗ್ಗೆ, ಮಾಜಿ ಸಚಿವ ನಾಗೇಂದ್ರ, ತಮಗೆ ಮಾಹಿತಿ ನೀಡಿದ್ದು, ಅವರ ಸುರಕ್ಷತೆಗಾಗಿ, ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಮಾಜಿಕ ಮಾಧ್ಯಮ ಎಕ್ಸ್ ದಲ್ಲಿ ಮಾಹಿತಿ ನೀಡಿದ್ದಾರೆ. ಮಧ್ಯಪ್ರಾಚ್ಯ ದೇಶಗಳಲ್ಲಿ, ವಿಮಾನ ಸಂಚಾರ ಸ್ಥಗಿತಗೊಂಡ ಕಾರಣ, ನಾಡಿಗೆ ಮರಳಲು ಸಾಧ್ಯವಾಗದೆ, ಯುದ್ಧಗ್ರಸ್ಥ ರಾಷ್ಟ್ರಗಳಲ್ಲಿ ಸಿಲುಕಿರುವ ಭಾರತೀಯರು, ನೆರವಿನ ಹಸ್ತ ತಲುಪುವ ತನಕ, ಸುರಕ್ಷಿತವಾಗಿರುವಂತೆ, ಅವರು ಮನವಿ ಮಾಡಿದ್ದಾರೆ. ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದಿಂದಾಗಿ, ಇಸ್ರೇಲ್, ಯು.ಎ.ಇ, ಇರಾನ್, ಖತಾರ್ ಸೇರಿದಂತೆ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನೆಲೆಸಿರುವ ಕನ್ನಡಿಗರ ಸುರಕ್ಷತೆ ತಮ್ಮ ಆದ್ಯತೆ. ದಿಲ್ಲಿ ನಿವಾಸಿ ಆಯುಕ್ತರ ಜೊತೆ ಸಮಾಲೋಚಿಸಿದ್ದಾಗಿ, ಮುಖ್ಯಮಂತ್ರಿ ಹೇಳಿದ್ದಾರೆ.

<><><>

**ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,** ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣದ, ರಾಜ್ಯ ಕ್ರಿಯಾ ಯೋಜನೆ ಹಾಗೂ ರೇಬೀಸ್ ಮುಕ್ತ ಕರ್ನಾಟಕಕ್ಕಾಗಿ, ರಾಜ್ಯ ಕ್ರಿಯಾ ಯೋಜನೆಯನ್ನು, ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ ಬಿಡುಗಡೆ ಮಾಡಿದರು. ದೇಶದಲ್ಲೇ ಮೊದಲ ಬಾರಿಗೆ, ಕರ್ನಾಟಕ ಸರ್ಕಾರ, ಹಾವು ಕಡಿತ ಮತ್ತು ಅದರಿಂದ

ಸಂಭವಿಸಬಹುದಾದ ಸಾವುಗಳನ್ನು, 'ಅಧಿಸೂಚಿತ ಕಾಯಿಲೆ' ಎಂದು ಘೋಷಿಸಿದೆ. 2030ರ ವೇಳೆಗೆ, ಹಾವು ಕಡಿತದಿಂದ ಸಂಭವಿಸುವ ಸಾವು ಮತ್ತು ಅಂಗವೈಕಲ್ಯಗಳನ್ನು, ಅರ್ಧದ ಷ್ಟು ಕಡಿಮೆ ಮಾಡುವುದು ರಾಜ್ಯ ಸರ್ಕಾರದ ಗುರಿಯಾಗಿದೆ.

<><><>

**ಸಚಿವ ದಿನೇಶ ಗುಂಡೂರಾವ ಮಾತನಾಡಿ,** ರಾಜ್ಯದ ಎಲ್ಲ ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು, ಹಾವು ಕಡಿತದ ಚಿಕಿತ್ಸಾ ಕೇಂದ್ರಗಳಾಗಿ ಗುರುತಿಸಲಾಗಿದೆ. ಉಚಿತ ಚಿಕಿತ್ಸೆ ಮತ್ತು ಪೂರಕ ಆ್ಯಂಟಿ ಸ್ನೇಕ್ ವೆನಮ್ ಲಭ್ಯತೆಯನ್ನು ಖಚಿತಪಡಿಸಲಾಗಿದೆ.

'ಒಂದೇ ಆರೋಗ್ಯ' ತತ್ವದಡಿ, 2030ರ ವೇಳೆಗೆ, ರೇಬೀಸ್ ಮುಕ್ತ ಕರ್ನಾಟಕ ನಿರ್ಮಿಸುವ ಬದ್ಧತೆಯಿಂದ, ರಾಜ್ಯದ ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ, ರೇಬೀಸ್ ವಿರೋಧಿ ಲಸಿಕೆ (ARV) ಮತ್ತು ಇಮ್ಯುನೊ ಗ್ಲಾಬ್ಯುಲಿನ್ (RIG) ಅನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದು, ತಿಳಿಸಿದರು.

<><><>

**ಬೆಂಗಳೂರು ಸೇರಿದಂತೆ,** ರಾಜ್ಯದ 11 ಪ್ರಮುಖ ನಗರಗಳಲ್ಲಿ, 'ರೇಬೀಸ್ ಮುಕ್ತ ನಗರ' ಅಭಿಯಾನವನ್ನು ಜಾರಿಗೆ ತರಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳೂ ಸಹ ಕಡ್ಡಾಯವಾಗಿ ಲಸಿಕೆಗಳ ದಾಸ್ತಾನು ಹೊಂದಿರಬೇಕು ಮತ್ತು ತುರ್ತು ಸಂದರ್ಭದಲ್ಲಿ ಚಿಕಿತ್ಸೆ ನೀಡಬೇಕು ಎಂದು ಸೂಚಿಸಲಾಗಿದೆ.

<><><>

**ದಕ್ಷಿಣ ಭಾರತದ, ಕಿಸಾನ್ ಸ್ವರಾಜ್,** ಮೂರು ದಿನಗಳ ಸಮ್ಮೇಳನ, ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ, ಮುಕ್ತ ಗಂಗೋತ್ರಿ ಆವರಣದಲ್ಲಿ ಇಂದು ಸಮಾರೋಪಗೊಳ್ಳಲಿದೆ. ದಕ್ಷಿಣ ಭಾರತದ 11 ರಾಜ್ಯಗಳಿಂದ, ಸಾವಯವ ಕೃಷಿಕರು ಪಾಲ್ಗೊಂಡಿದ್ದು, 37 ಸಾವಯವ ಉತ್ಪನ್ನಗಳ ಮಳಿಗೆಗಳು, ಆಕರ್ಷಕವಾಗಿವೆ. ಅಸ್ಸಾಂ, ಆಂಧ್ರಪ್ರದೇಶ, ಕೇರಳ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ ಹಾಗೂ ರಾಜ್ಯದ, ಐವತ್ತಕ್ಕೂ ಹೆಚ್ಚು ಬೀಜ ಸಂರಕ್ಷಕರು, ವಿವಿಧ ಬಗೆಯ ದೇಸಿ ಬೀಜ, ಹಣ್ಣು, ಕಾಯಿ, ತೆನೆಗಳನ್ನು ಪ್ರದರ್ಶನಕ್ಕೆ ಅಣಿ ಗೊಳಿಸಿದ್ದಾರೆ. ಕಿಸಾನ್ ಸ್ವರಾಜ್ ಸಮ್ಮೇಳನದ ಎರಡನೇ ದಿನ ನಡೆದ ಗೋಷ್ಠಿಗಳ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಸಂಘಟಕ, ಮೈಸೂರಿನ ಜಿ. ಕೃಷ್ಣಪ್ರಸಾದ.

<><><>

**ಜಿ. ಕೃಷ್ಣಪ್ರಸಾದ ಧ್ವನಿ 60 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**'ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು;** ವಿಕಸಿತ ಭಾರತದ ವೇಗವರ್ಧಕರು' ಎಂಬ ಧ್ಯೇಯದೊಂದಿಗೆ, ನಾಡಿನಾದ್ಯಂತ, ರಾಷ್ಟ್ರೀಯ ವಿಜ್ಞಾನ ದಿನ, ಆಚರಿಸಲಾಯಿತು. 'ರಾಮನ್ ಪರಿಣಾಮ'ಕ್ಕಾಗಿ, ನೊಬೆಲ್ ಪುರಸ್ಕೃತರಾದ, ಖಗೋಳ ಭೌತ ಶಾಸ್ತ್ರಜ್ಞ ಸರ್ ಚಂದ್ರಶೇಖರ ವೆಂಕಟರಾಮನ್, ತಮ್ಮ ಆವಿಷ್ಕಾರವನ್ನು ಮಂಡಿಸಿದ ದಿನವನ್ನು, ಭಾರತದ ರಾಷ್ಟ್ರೀಯ ವಿಜ್ಞಾನ ದಿನವಾಗಿ

ಆಚರಿಸಲಾಗುತ್ತದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ವಿಜ್ಞಾನಿ, ಧಾರವಾಡದ ಪ್ರೊಫೆಸರ್ ಎಸ್.ಎಂ. ಶಿವಪ್ರಸಾದ.

<><><>

**ಎಸ್.ಎಂ. ಶಿವಪ್ರಸಾದ ಧ್ವನಿ 60 ಸೆಕೆಂದುಗಳು**

<><><>

**ಪ್ರೌಢ ಶಾಲೆಯ ವಿಜ್ಞಾನ ಮತ್ತು ಗಣಿತ ಶಿಕ್ಷಕರಿಗೆ,** ಬೋಧನಾ ಕೌಶಲ ತರಬೇತಿ ನೀಡಲು, ಧಾರವಾಡದ ಸಾಧನಕೇರಿಯಲ್ಲಿ, ನೂತನವಾಗಿ ನಿರ್ಮಾಣಗೊಂಡ, 'ಮೈಂಡ್ ವೇವ್ ಎಜು ಹಬ್' ಕ್ಯಾಂಪಸ್‌ನ್ನು, ಇಂದು, ಬೆಳಗ್ಗೆ 10.30ಕ್ಕೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ವಿಶ್ರಾಂತ ಅಧ್ಯಕ್ಷ, ಎ.ಎಸ್. ಕಿರಣಕುಮಾರ ಉದ್ಘಾಟಿಸಲಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ಪಾಟೀಲ, ಶಿಕ್ಷಣ ತಜ್ಞ ಗುರುರಾಜ ಕರ್ಜಗಿ, ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಭಾರತ ರತ್ನ ಸಿ.ಎನ್.ಆರ್. ರಾವ್ ಆನ್ಲೈನ್‌ನಲ್ಲಿ, *ಗ್ರ್ಯಾಜ್ಯುಯೇಟ್ ಫಿನಿಷಿಂಗ್ ಸ್ಕೂಲ್* ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಮಾತನಾಡಲಿದ್ದಾರೆ ಎಂದು, ಸಂಚಾಲಕರು ತಿಳಿಸಿದ್ದಾರೆ.

<><><>

**ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆ – ಐ.ಟಿ.ಎಫ್,** 30 ಸಾವಿರ ಅಮೆರಿಕನ್ ಡಾಲರ್ ಬಹುಮಾನದ, ಮಹಿಳಾ ಅಂತಾರಾಷ್ಟ್ರೀಯ ಟೆನಿಸ್ ಟೂರ್ನಿ, ಇಂದಿನಿಂದ 8ನೇ ತಾರೀಖಿನ ವರೆಗೆ, ಕಲಬುರಗಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ, ಸಚಿವ ಶರಣಪ್ರಕಾಶ ಪಾಟೀಲ, ಟೆನಿಸ್ ಟೂರ್ನಿಯ, ಲಾಂಛನವನ್ನು ಅನಾವರಣಗೊಳಿಸಿದರು.

<><><>

**ಇಂದು ಮತ್ತು ನಾಳೆ, ಅರ್ಹತಾ ಸುತ್ತಿನ** ಪಂದ್ಯಗಳು ನಡೆಯಲಿವೆ. 3ನೇ ತಾರೀಖು, ಮುಖ್ಯ ಡ್ರಾ ಪಂದ್ಯಗಳು ಆರಂಭವಾಗಲಿವೆ. ಪಂದ್ಯಾವಳಿಯಲ್ಲಿ, 32 ಜನ ಆಟಗಾರ್ತಿಯರ ಸಿಂಗಲ್ಸ್ ಹಾಗೂ 16 ಜೋಡಿಗಳ, ಡಬಲ್ಸ್ ಪಂದ್ಯಾವಳಿ ನಡೆಯಲಿದೆ.

<><><>

**11ಕ್ಕೂ ಹೆಚ್ಚು ದೇಶಗಳ ಟೆನಿಸ್ ಆಟಗಾರ್ತಿಯರು** ಭಾಗವಹಿಸಲಿದ್ದಾರೆ. ಭಾರತದ ಪ್ರತಿಭೆಗಳಾದ ವೈ ಷ್ಣವಿ ಆಡ್ಕರ್, ಶ್ರೀವಳ್ಳಿ ರಶ್ಮಿಕಾ ಭಮಿಡಿಪಾಟಿ, ಅಂಕಿತಾ ರೈನಾ, ಝೀಲ್ ದೇಸಾಯಿ, ಆಕಾಂಕ್ಷಾ ದಿಲೀಪ ನಿಟ್ಟೂರು, ಶ್ರುತಿ ಅಹ್ಲಾವತ್ ಮತ್ತು ಸೋನಲ್ ಪಾಟೀಲ ಕಣಕ್ಕಿಳಿಯಲಿದ್ದಾರೆ.

<><><>

**ನಾಲ್ವರು ಭಾರತೀಯ ಆಟಗಾರ್ತಿಯರಾದ** ಜೆನ್ನಿಫರ್ ಲುಇಖಾಮ್, ಸೋಹಾ ಸಾದಿಕ್, ಸಾಮಾ ಚಿವಿಕಾ ರೆಡ್ಡಿ ಮತ್ತು ಅಮೋದಿನಿ ನಾಯಕ್ ಅವರಿಗೆ, ಮುಖ್ಯ ಡ್ರಾಕ್ಕೆ ವೈಲ್ಡ್ ಕಾರ್ಡ್ ನೀಡಲಾಗಿದೆ.

<><><>

**ಹುಬ್ಬಳ್ಳಿ ಧಾರವಾಡ,** ಪೊಲೀಸ್ ಆಯುಕ್ತಾಲಯ ಮತ್ತು ಧಾರವಾಡ ಜಿಲ್ಲಾ ಪೊಲೀಸ್ ಸಹಯೋಗದಲ್ಲಿ, ಇಂದು ಬೆಳಗ್ಗೆ 7 ಗಂಟೆಗೆ, ತೋಳನಕೆರೆಯಿಂದ ಮ್ಯಾರಾಥಾನ್ ಆರಂಭವಾಗಿದೆ. ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಮಾಹಿತಿ ನೀಡಿ, "ನಮ್ಮ ಪೊಲೀಸ್ ನಮ್ಮ ಹೆಮ್ಮೆ" ಎಂಬ ಶೀರ್ಷಿಕೆಯಡಿ, "ಫಿಟ್ನೆಸ್ ಫಾರ್ ಆಲ್", "ಮಾದಕ ವ್ಯಸನ ಮುಕ್ತ ಕರ್ನಾಟಕ" ಮತ್ತು "ಸೈಬರ್ ಕ್ರೈಂ ಜಾಗೃತಿ" ಧ್ಯೇಯದೊಂದಿಗೆ, ಜನ ಜಾಗೃತಿ ಓಟ ಆಯೋಜಿಸಲಾಗಿದೆ, ಎಂದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಮಧ್ಯಪ್ರಾಚ್ಯ ದೇಶಗಳಿಗೆ, ವಿಮಾನ ಸಂಚಾರ ಸ್ಥಗಿತ;** ಯುದ್ಧಗ್ರಸ್ಥ ರಾಷ್ಟ್ರಗಳಲ್ಲಿ ಸಿಲುಕಿರುವ ಕನ್ನಡಿಗರಿಗೆ, ನೆರವಿನ ಹಸ್ತ – ಮುಖ್ಯಮಂತ್ರಿ.
- **‘ಅಧಿಸೂಚಿತ ಕಾಯಿಲೆ’ಯಾಗಿ, ಹಾವು ಕಡಿತ;** ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ, ಉಚಿತ ಲಸಿಕೆಗೆ, ವ್ಯವಸ್ಥೆ.
- **ಮೂರು ದಿನಗಳ, ಕಿಸಾನ್ ಸ್ವರಾಜ್,** ಸಮ್ಮೇಳನ; ಮೈಸೂರಿನಲ್ಲಿ ಇಂದು ಸಮಾರೋಪ.
- **ಕಲಬುರಗಿಯಲ್ಲಿ ಇಂದಿನಿಂದ,** ಐ.ಟಿ.ಎಫ್, ಮಹಿಳಾ ಅಂತಾರಾಷ್ಟ್ರೀಯ ಟೆನಿಸ್ ಟೂರ್ನಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>